## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 788(857) |
| ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 24-08-2026 |
| ಉತ್ತರಿಸುವವರು | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ಅರಣ್ಯ ರಕ್ಷಕರು, ಅರಣ್ಯ ವೀಕ್ಷಕರು ಹಾಗೂ ಇತರ ಸಿಬ್ಬಂದಿಗಳ ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು; | ಅರಣ್ಯ ಇಲಾಖೆಯ ವಿವಿಧ ವೃಂದ(ಗ್ರೂಪ್-ಸಿ ಮತ್ತು ಗ್ರೂಪ್-ಡಿ)ಗಳಲ್ಲಿ ಮಂಜೂರಾದ, ಭರ್ತಿಯಾದ ಮತ್ತು ಖಾಲಿಯಿರುವ ಹುದ್ದೆಗಳ ಮಾಹಿತಿಯನ್ನು **ಅನುಬಂಧ-1ರಲ್ಲಿ** ಹಾಗೂ ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಕಾಲ ಕಾಲಕ್ಕೆ ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳ ವಿವರವನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಗಡಿಭಾಗದ ಗ್ರಾಮಗಳಲ್ಲಿ ಮಾನವ-ವನ್ಯಜೀವಿ ಸಂಘರ್ಷ ಕಡಿಮೆ ಮಾಡಲು ಸೋಲಾರ್ ಬೇಲಿ ಆನೆ ತಡೆ ಕಂದಕ ಹಾಗೂ ಇತರೆ ರಕ್ಷಣಾ ವ್ಯವಸ್ಥೆಗಳಿಗಾಗಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; | ಕಳೆದ 8 ವರ್ಷಗಳಲ್ಲಿ ಅರಣ್ಯದ ಗಡಿ ಭಾಗಗಳಲ್ಲಿ ಸೌರ ವಿದ್ಯುತ್ ಬೇಲಿ, ಕಂದಕ ನಿರ್ಮಾಣ, ಜಾಗೃತಿ ಕಾರ್ಯಕ್ರಮಗಳು ಮತ್ತು ಕ್ಷಿಪ್ರ ಸ್ಪಂದನಾ ತಂಡ (Rapid Response Team) ಗಳು ಸೇರಿದಂತೆ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರಾಜ್ಯ ವಲಯ ಯೋಜನೆ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರ **ಅನುಬಂಧ-3** ರಲ್ಲಿ ನೀಡಲಾಗಿದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಸಾಮಾಜಿಕ ಅರಣ್ಯ (Social Forestry) ಯೋಜನೆಯಡಿ ಎಷ್ಟು ಗಿಡಗಳನ್ನು ನೆಡಲಾಗಿದೆ; ಅವುಗಳಲ್ಲಿ ಎಷ್ಟು ಬದುಕುಳಿದಿವೆ; ಅರಣ್ಯ ಅವಲಂಬಿತ. ಸಮುದಾಯಗಳ ಜೀವನೋಪಾಯ ಅಭಿವೃದ್ಧಿಗಾಗಿ ಜೇನು, ಬಿದಿರು, ಲಾಕ್ ಹಾಗೂ ಇತರೆ | ಕಳೆದ 3 ವರ್ಷಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ನೆಡಲಾಗಿರುವ ಸಸಿಗಳ **ವಿವರವನ್ನು ಅನುಬಂಧ-4 ರಲ್ಲಿ** ನೀಡಲಾಗಿದೆ.<br>ನೆಡುತೋಪು ನಿರ್ಮಾಣದ ನಂತರ 3 ವರ್ಷಗಳ ಕಾಲ ನೆಡುತೋಪುಗಳ ನಿರ್ವಹಣೆ ಮಾಡಲಾಗುವುದು. ಕಳೆದ 3 ವರ್ಷಗಳಲ್ಲಿ ಬೆಳೆಸಿದ ನೆಡುತೋಪು ನಿರ್ವಹಣೆ ಅವಧಿಯಲ್ಲಿರುತ್ತವೆ. ನಿರ್ವಹಣೆ ಅವಧಿಯಲ್ಲಿ ಸಾಮಾನ್ಯವಾಗಿ ಬದುಕುಳಿಯುವ ಸಸಿಗಳ ಪ್ರಮಾಣ ಸರಾಸರಿ ಶೇಕಡ 70% ರಿಂದ 80% ರಷ್ಟಿರುತ್ತದೆ.<br>ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಪ್ರದೇಶ ಉಪ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಪ್ರತಿ ಕುಟುಂಬಕ್ಕೆ 50 ಬಿದಿರಿನಂತೆ ಬೇಡಿಕೆಗನುಗುಣವಾಗಿ ಉಚಿತ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | ಅರಣ ಉತ್ಪನ್ನಗಳಿಗೆ ಸರ್ಕಾರ ನೀಡುತ್ತಿರುವ ಬೆಂಬಲ ಮತ್ತು ಮಾರುಕಟ್ಟೆ ವ್ಯವಸ್ಥೆ ಏನು; | ಬಿದಿರು ವಿತರಣೆ ಮಾಡಲಾಗುವುದು. ರಾಷ್ಟ್ರೀಯ ಬಿದಿರು ಮಿಷನ್ ಯೋಜನೆಯಡಿ ಅರಣ್ಯ ಅವಲಂಬಿತ ಸಮುದಾಯಗಳ ಜೀವನೋಪಾಯ ಅಭಿವೃದ್ಧಿಗಾಗಿ ಫಲಾನುಭವಿಗಳ ರೈತರ ಜಮೀನಿನಲ್ಲಿ ಬಿದಿರು ಸಸಿಗಳನ್ನು ಬೆಳೆಸಲು ಹಾಗೂ ನರ್ಸರಿ ನಿರ್ಮಾಣ ಮಾಡಲು 50% ಸಬ್ಸಿಡಿ ಯನ್ನು ರಾಷ್ಟ್ರೀಯ ಬಿದಿರು ಅಭಿಯಾನ ಮಾರ್ಗಸೂಚಿಗಳ ಪ್ರಕಾರ ಒದಗಿಸಲಾಗುವುದು.<br><br>ಇದಲ್ಲದೇ ಜೀವನೋಪಯಕ್ಕಾಗಿ ಬಿದಿರನ್ನು ಅವಲಂಬಿಸಿರುವ ಮೇದಾರರಿಗೆ ರಿಯಾಯಿತಿ ದರದಲ್ಲಿ ಬಿದಿರನ್ನು ನೀಡಲಾಗುತ್ತಿದೆ. |
| ಈ) | ರಾಜ್ಯದ ರಾಷ್ಟ್ರೀಯ ಉದ್ಯಾನಗಳು ಹಾಗೂ ವನ್ಯಜೀವಿ ಅಭಯಾರಣ್ಯಗಳಲ್ಲಿ ಪರಿಸರ ಪ್ರವಾಸೋದ್‌ಯಮ (Eco-tourism) ಅಭಿವೃದ್ಧಿಪಡಿಸುವ ಮೂಲಕ ಸ್ಥಳೀಯ ಯುವಕರಿಗೆ ಉದ್ಯೋಗ ಸೃಷ್ಟಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದ ರಾಷ್ಟ್ರೀಯ ಉದ್ಯಾನವನಗಳು ಹಾಗೂ ವನ್ಯಜೀವಿ ಅಭಯಾರಣ್ಯಗಳಲ್ಲಿ ಪರಿಸರ ಪ್ರವಾಸೋದ್ಯಮ (Eco-tourism) ಅಭಿವೃದ್ಧಿಪಡಿಸುವ ಮೂಲಕ ಸ್ಥಳೀಯ ಯುವಕರಿಗೆ ಉದ್ಯೋಗ ಸೃಷ್ಟಿಸಲು ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>➢ ಚಾರಣಪಥಗಳಲ್ಲಿ ಚಾರಣಿಗರಿಗೆ ಮಾರ್ಗದರ್ಶನ ನೀಡಲು ಸ್ಥಳೀಯ ಯುವಕರಿಗೆ ತರಬೇತಿಯನ್ನು ನೀಡಿ ಗೈಡ್‌ಗಳನ್ನಾಗಿ ನೇಮಿಸಿಕೊಳ್ಳಲಾಗಿದೆ.<br>➢ ಪರಿಸರ ಪ್ರವಾಸೋದ್ಯಮ ವಲಯದಲ್ಲಿನ ಸಫಾರಿ ವಾಹನಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸ್ಥಳೀಯ ಯುವಕರನ್ನು ವಾಹನ ಚಾಲಕರಾಗಿ ನಿಯೋಜಿಸಿಕೊಳ್ಳಲಾಗುತ್ತಿದೆ.<br>➢ ಪ್ರವಾಸೋದ್ಯಮ ವಲಯದಲ್ಲಿನ ವೀಕ್ಷಣ ರೇಖೆ ನಿರ್ವಹಣೆ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಸ್ಥಳೀಯ ಯುವಕರನ್ನು ತೊಡಗಿಸಿಕೊಳ್ಳಲಾಗುತ್ತಿದೆ.<br>➢ ಪರಿಸರ ಅಭಿವೃದ್ಧಿ ಸಮಿತಿ ವತಿಯಿಂದ ಪ್ರವಾಸೋದ್ಯಮದ ವ್ಯಾಪ್ತಿಯಲ್ಲಿ ಸ್ಥಳೀಯರಿಗೆ ಅಂಗಡಿ-ಮಳಿಗೆಗೆ ಅನುಮತಿ ನೀಡಲಾಗುತ್ತದೆ.<br><br>ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಮೂಲಕ ಸ್ವ-ಸಹಾಯ ಸಂಘಗಳ ಚಟುವಟಿಕೆಗಳನ್ನು ಚುರುಕುಗೊಳಿಸಿ ಮಹಿಳೆಯರ ಕೌಶಲ್ಯಾಭಿವೃದ್ಧಿ, ಜೇನು ಸಾಕಾಣಿಕೆ, ಟೈಲರಿಂಗ್, ಗುಡಿ ಕೈಗಾರಿಕೆ, ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ, ವಾಹನ ಚಾಲನಾ ತರಬೇತಿ ನೀಡಿ ಸ್ವ-ಉದ್ಯೋಗದ ಮೂಲಕ ಸ್ವಾವಲಂಬನೆ ಹೊಂದಲು ಉತ್ತೇಜಿಸಲಾಗುತ್ತಿದೆ. |
| ಉ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಹಸಿರು ಹೊದಿಕೆ (Green Cover) ಹೆಚ್ಚಿಸಲು ಎಷ್ಟು ಗುರಿ ನಿಗದಿಪಡಿಸಲಾಗಿತ್ತು; ಅದರಲ್ಲಿ ಎಷ್ಟು | ಹವಾಮಾನ ಬದಲಾವಣೆ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಹಸಿರು ಹೊದಿಕೆಯನ್ನು ಹೆಚ್ಚಿಸಲು ಹಾಗೂ ಅರಣ, ಸಂರಕ್ಷಣೆ, ಜಲಮೂಲಗಳ ರಕ್ಷಣೆ ಹಾಗೂ ಜೀವ ವೈವಿಧ್ಯ ಸಂರಕ್ಷಣೆಗೆ ಅನುಕೂಲವಾಗುವಂತೆ ಇಲಾಖೆಯ ವಿವಿಧ ಯೋಜನೆಗಳಡಿ ಈ ಕೆಳಕಂಡಂತೆ ನಾಲ್ಕು ವರ್ಷಗಳಲ್ಲಿ ಬೆಳೆಸಲಾದ ನೆಡುತೋಪುಗಳ ವಿವರ ಈ ಕೆಳಕಂಡಂತಿದೆ. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th colspan="5">ಉತ್ತರ</th></tr>
<tr><td rowspan="6"></td><td rowspan="6">ಸಾಧನೆಯಾಗಿದೆ;<br>ಹವಾಮಾನ ಬದಲಾವಣೆ ಹಿನ್ನೆಲೆಯಲ್ಲಿ ಅರಣ್ಯ ಸಂರಕ್ಷಣೆ, ಜಲಮೂಲಗಳ ರಕ್ಷಣೆ ಹಾಗೂ ಜೀವ ವೈವಿಧ್ಯ ಸಂರಕ್ಷಣೆಗೆ ಸರ್ಕಾರ ರೂಪಿಸಿರುವ ವಿಶೇಷ ಕಾರ್ಯಯೋಜನೆಗಳೇನು?</td><td rowspan="2">ವರ್ಷ</td><td colspan="2">ನೆಡುತೋಪು ವಿಸ್ತೀರ್ಣ (ಹೆಕ್ಟೇರುಗಳಲ್ಲಿ)</td><td colspan="2">ನೆಟ್ಟ ಸಸಿಗಳು (ಲಕ್ಷಗಳಲ್ಲಿ)</td></tr>
<tr><td>ಗುರಿ</td><td>ಸಾಧನೆ</td><td>ಗುರಿ</td><td>ಸಾಧನೆ</td></tr>
<tr><td>2023-24</td><td>51,000</td><td>50,532</td><td>277.250</td><td>276.667</td></tr>
<tr><td>2024-25</td><td>53,500</td><td>53,294</td><td>266.500</td><td>265.218</td></tr>
<tr><td>2025-26</td><td>65,073</td><td>64,552</td><td>331.612</td><td>326.075</td></tr>
<tr><td>2026-27 (ಜುಲೈ ಅಂತ್ಯದವರೆಗೆ)</td><td>42,552</td><td>34,144</td><td>292.277</td><td>229.021</td></tr>
</table>

**ಸಂಖ್ಯೆ: ಎಫ್‌ಇಇ 230 ಎಫ್‌ಎನ್‌ಜಿ 2026**

(ರಾಮಲಿಂಗಾರೆಡ್ಡಿ)
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.**

# ಅನುಬಂಧ-1

## ಅರಣ್ಯ ಇಲಾಖೆಯ ಸಿಬ್ಬಂದಿಯ ವಿವಿಧ ವೃಂದಗಳಲ್ಲಿನ ಹುದ್ದೆಗಳ ವಿವರ

| Sl.no.. | cadre | Sanctioned posts | filled posts | vacant posts |
|---|---|---|---|---|
| 1 | Draughtsman grade-I | 4 | 0 | 4 |
| 2 | Draughtsman grade-II | 26 | 0 | 26 |
| 3 | Deputy Range Forest Officer-cum- Surveyor | 3008 | 2532 | 476 |
| 4 | Superintendent | 194 | 74 | 120 |
| 5 | Forest Guard | 5494 | 3331 | 2163 |
| 6 | Senior Driver | 49 | 12 | 37 |
| 7 | Driver | 174 | 1 | 173 |
| 8 | First Division Assistant | 639 | 522 | 117 |
| 9 | Stenographers | 44 | 25 | 19 |
| 10 | Senior Typist | 22 | 6 | 16 |
| 11 | Second Division Assistant | 524 | 209 | 315 |
| 12 | Typist | 107 | 10 | 97 |
| 13 | Elephant Jamedar | 8 | 6 | 2 |
| 14 | Elephant Mahout | 122 | 86 | 36 |
| 15 | Elephant Kawadi | 122 | 34 | 88 |
| 16 | Forest Watcher | 1892 | 381 | 1511 |
| 17 | Attenders / Daftarband/ Jamedar / Lift Attender / Pumpset Operator / Wireless mechanic | 29 | 18 | 11 |
| 18 | Butlers | 5 | 2 | 3 |
| 19 | Caretaker of Forest Lodges, Tindal, Ward Boy, Laskar, Female Ward Servant, Sweeper, Scavenger, Cooli, Mali, Dalayath, Gardener, Cleaner, Watchman | 889 | 483 | 406 |
| Total | | 13322 | 7732 | 5620 |

## ಅನುಬಂಧ-2

**ಅರಣ್ಯ ಇಲಾಖೆಯ ವಿವಿಧ ವೃಂದಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮದ ವಿವರ**

| ಕ್ರ. ಸಂ | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| 1 | Draughtsman Grade -I | **ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅದರಂತೆ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.**<br>**ಬಡ್ತಿ: (PR)**<br>Non-HK/ HK:- ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲ-ಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| 2 | Draughtsman Grade -II | **ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.**<br>**ನೇರ ನೇಮಕಾತಿ (DR) :**<br>**Non-HK (22 ಹುದ್ದೆಗಳು) & HK (4) ಹುದ್ದೆಗಳು:-**<br>ದ್ವಿತೀಯ ದರ್ಜೆ ಆಕೃತಿ ರಚನಾಕಾರರು (Draughtsman Grade-II) (ಉಳಿಕೆ ಮೂಲ ವೃಂದ) - 12 ಹುದ್ದೆಗಳು ಮತ್ತು ದ್ವಿತೀಯ ದರ್ಜೆ ಆಕೃತಿ ರಚನಾಕಾರರು (Draughtsman Grade-II) (ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ) - 3 ಹುದ್ದೆ ಒಟ್ಟು 15 ಹುದ್ದೆಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯನ್ವಯ ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಪೂರ್ವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

| | | |
|---|---|---|
| 3 | Deputy Range Forest Officer-cum- Surveyor | **ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 50% ನೇರ ನೇಮಕಾತಿ ಮತ್ತು 50% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.**<br>**ನೇರ ನೇಮಕಾತಿ:(DR)**<br>Non-HK/ HK:-ಸರ್ಕಾರದ ಪತ್ರ ಸಂಖ್ಯೆ: ಅಪಜೀ 115 ಅಪಸೇ 2016 ದಿನಾಂಕ: 08.11.2016ರಲ್ಲಿ 143 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸಹಮತಿಯನ್ನು ನೀಡಲಾಗಿರುತ್ತದೆ. ಮುಂದುವರೆದು, ಈ ಕಚೇರಿ ಪತ್ರ ಸಂಖ್ಯೆ: KFD/HOFF/B9(RCT)/7/2025-PnR-KFD, ದಿನಾಂಕ: 18.08.2025 & 24.07.2026ರಲ್ಲಿ ಖಾಲಿ ಇರುವ 357 ಹುದ್ದೆಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯನ್ವಯ ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಪೂರ್ವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>**ಬಡ್ತಿ: (PR)**<br>Non-HK/ HK: ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| 4 | Forest Guard | **ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 75% ನೇರ ನೇಮಕಾತಿ ಮತ್ತು 25% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.**<br>**ನೇರ ನೇಮಕಾತಿ: (DR)**<br>Non-HK:- ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ ಇವರ ಅಧಿಸೂಚನೆ ಸಂಖ್ಯೆ: KFD/HOFF/B9(RCT)/3/2022-PnR-KFD, ದಿನಾಂಕ: 17.11.2023ರಲ್ಲಿ 540 ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅರಣ್ಯ ರಕ್ಷಕ) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಸಂಬಂಧ ವಿವಿಧ ವೃತ್ತ/ವಿಭಾಗಗಳಲ್ಲಿ ಒಟ್ಟು 482 ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿರುತ್ತದೆ. ವಿವಿಧ ಕಾರಣಗಳಿಂದ ಭರ್ತಿಯಾಗದೇ ಉಳಿದ ರಿಕ್ತ ಸ್ಥಾನಗಳಿಗೆ 1:1(ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಹೆಚ್ಚುವರಿ ಪಟ್ಟಿಯನ್ನು ದಿನಾಂಕ: 07.08.2026ರಂದು ಪ್ರಕಟಿಸಲಾಗಿರುತ್ತದೆ.<br><br>ಉಳಿಕೆ ಮೂಲ ವೃಂದದ (Residual Parent Cadre (Non-HK) ನೇರ ನೇಮಕಾತಿ [DR] **ಕೋಟಾದಡಿ** ಖಾಲಿಯಿರುವ ಗಸ್ತು ವನಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ) ನೇರ ನೇಮಕಾತಿ ಕೋಟಾದಡಿ ಪ್ರಸ್ತುತ ಖಾಲಿಯಿರುವ 1278 ಹುದ್ದೆಗಳ ಪೈಕಿ ಆರ್ಥಿಕ ಇಲಾಖೆಯ |

| | | |
|---|---|---|
| | | ಅನುಮೋದನೆಯನ್ವಯ 320 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಪೂರ್ವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>**HK:-** ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ (HK) ನೇರ ನೇಮಕಾತಿ [DR] ಕೋಟಾದಡಿ ಖಾಲಿಯಿರುವ ಗಸ್ತು ವನಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ) ನೇರ ನೇಮಕಾತಿ ಕೋಟಾದಡಿ ಪ್ರಸ್ತುತ ಖಾಲಿಯಿರುವ 143 ಹುದ್ದೆಗಳ ಪೈಕಿ 110 ಹುದ್ದೆಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯನ್ವಯ ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಪೂರ್ವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>**ಬಡ್ತಿ (PR):**<br>Non-HK/ HK:- ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲ-ಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| **5** | Senior Driver | **ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅದರಂತೆ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.**<br>**ಬಡ್ತಿ: (PR)**<br>Non-HK/ HK:- ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲ-ಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| **6** | Driver | ವಾಹನ ಚಾಲಕ ಹುದ್ದೆಗಳನ್ನು ಸರ್ಕಾರದ ಪತ್ರ ಸಂಖ್ಯೆ: ಅಪಜೀ 005 ಅಅಸೇ 2014, ದಿನಾಂಕ 07.07.2014ರಲ್ಲಿ ಹೊರಗುತ್ತಿಗೆ ಮೂಲಕ ಭರ್ತಿ ಮಾಡಲು ಆದೇಶಿಸಲಾಗಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 02 ಬಿಇಎಂ 2021, ದಿನಾಂಕ:24.11.2021ರ ಕ್ರಮ ಸಂಖ್ಯೆ:03ರಲ್ಲಿ ವಾಹನ ಚಾಲಕರ ಹುದ್ದೆಗಳನ್ನು ಅನುದಾನದ ಲಭ್ಯತೆಗೆ ಒಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳತಕ್ಕದ್ದು ಎಂದು ತಿಳಿಸಿರುತ್ತಾರೆ. |

| | | |
|---|---|---|
| 7 | Superintendent | **ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.**<br>**ಬಡ್ತಿ (PR):**<br>Non-HK/ HK:- ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲ-ಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| 8 | First Division Assistant | **ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 50% ನೇರ ನೇಮಕಾತಿ ಮತ್ತು 50% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.**<br>**ನೇರ ನೇಮಕಾತಿ (DR):**<br>**Non-HK:-**<br>ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 46 ಪ್ರಥಮ ದರ್ಜೆ ಸಹಾಯಕ ಉಳಿಕೆ ಮೂಲ ವೃಂದದ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯನ್ವಯ ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕ್ರಮವಹಿಸಲಾಗುತ್ತಿದೆ.<br><br>**HK:-**<br>ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 26 ಪ್ರಥಮ ದರ್ಜೆ ಸಹಾಯಕ ಕಲ್ಯಾಣ ಕರ್ನಾಟಕ ಪ್ರದೇಶ ವೃಂದದ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯನ್ವಯ ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕ್ರಮವಹಿಸಲಾಗುತ್ತಿದೆ.<br><br>**ಬಡ್ತಿ (PR):**<br>Non-HK/ HK:- ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲ-ಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| 9 | Senior Typist | **ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.**<br>**ಬಡ್ತಿ (PR):-**<br>**Non-HK / HK :-** ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲ-ಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| 10 | Second Division Assistant | **ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 67% ನೇರ ನೇಮಕಾತಿ ಮತ್ತು 33% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.**<br>**ನೇರ ನೇಮಕಾತಿ (DR):-**<br>**Non-HK:-**<br>ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 45 ದ್ವಿತೀಯ ದರ್ಜೆ ಸಹಾಯಕ ಉಳಿಕೆ ಮೂಲ ವೃಂದದ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯನ್ವಯ ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕ್ರಮವಹಿಸಲಾಗುತ್ತಿದೆ.<br><br>**HK:-**<br>ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 25 ದ್ವಿತೀಯ ದರ್ಜೆ ಸಹಾಯಕ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯನ್ವಯ ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕ್ರಮವಹಿಸಲಾಗುತ್ತಿದೆ.<br><br>**ಬಡ್ತಿ (PR):-**<br>Non-HK/ HK:- ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲ-ಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| **11** | Elephant Kawadi | **ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 100 % ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.**<br>**ನೇರ ನೇಮಕಾತಿ:(DR)**<br>**Non-HK:-** ಅರಣ್ಯ ಇಲಾಖೆಯ 51 ಆನೆ ಕವಾಡಿಗ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಅನುಮೋದನೆಯನ್ವಯ ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳಲು ಚಾಮರಾಜನಗರ, ಮೈಸೂರು, ಕೊಡಗು, ಶಿವಮೊಗ್ಗ ಮತ್ತು ಕೆನರಾ ವೃತ್ತಗಳಲ್ಲಿ ದಿನಾಂಕ: 27.07.2026ರಂದು ನೇರ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. |
| **12** | Elephant Mahout | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ವೃತ್ತ ಮಟ್ಟದಲ್ಲಿ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. |
| **13** | Elephant Jamedar | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ವೃತ್ತ ಮಟ್ಟದಲ್ಲಿ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. |
| **14** | Forest Watcher | **ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 75% ನೇರ ನೇಮಕಾತಿ ಮತ್ತು 25% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.**<br>**ನೇರ ನೇಮಕಾತಿ: (DR)**<br>**Non-HK/ HK :-** ಅರಣ್ಯ ಇಲಾಖೆಯಲ್ಲಿ ಅರಣ್ಯ ವೀಕ್ಷಕ ವೃಂದದಲ್ಲಿ ಖಾಲಿ ಇರುವ 750 ಹುದ್ದೆಗಳ ಪೈಕಿ ಆರ್ಥಿಕ ಇಲಾಖೆಯ ಅನುಮೋದನೆಯನ್ವಯ ಉಳಿಕೆ ಮೂಲ ವೃಂದದಲ್ಲಿ 700 ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 50 ಹಾಗೂ ಬ್ಯಾಕ್‌ಲಾಗ್ ಉಳಿದ 25 ಹುದ್ದೆಗಳನ್ನು ಒಳಗೊಂಡಂತೆ ಒಟ್ಟು 775 ಅರಣ್ಯ ವೀಕ್ಷಕ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮದನುಸಾರ ವಿವಿಧ ವೃತ್ತಗಳಲ್ಲಿ ನೇರ ನೇಮಕಾತಿ ಅಧಿಸೂಚನೆಯನ್ನು ದಿನಾಂಕ: 20.07.2026ರಂದು ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತವೆ. |

| | | |
|---|---|---|
| | | **ಬಡ್ತಿ (PR):** ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲ-ಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| **15** | Stenographers / Typist / Attenders / Daftarband/ Jamedar / Lift Attender / Pumpset Operator / Wireless mechanic / Butlers / Caretaker of Forest Lodges/ Tindal/ Ward Boy/ Laskar / Female Ward Servant / Sweeper / Scavenger/ Cooli / Mali / Dalayath / Gardener/ Cleaner / Watchman | ಆರ್ಥಿಕ ಇಲಾಖೆ ಅನುಮೋದನೆಯನ್ವಯ ಸದರಿ ಹುದ್ದೆಗಳನ್ನು ಅನುದಾನದ ಲಭ್ಯತೆಗೆ ಒಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲಾಗುತ್ತಿದೆ. |

# ಅನುಬಂಧ-3

ಕಳೆದ 8 ವರ್ಷಗಳಲ್ಲಿ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಣ ಹಾಗೂ ರಕ್ಷಣಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರಾಜ್ಯ ವಲಯ ಯೋಜನ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರಗಳು
(ಶ್ರೀ ಎಂ. ನಾಗರಾಜು ಇವರ ಪ್ರಶ್ನೆ ಸಂಖ್ಯೆ:788(857)

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಲೆಕ್ಕ ಶೀರ್ಷಿಕೆ: | ಕಾಮಗಾರಿ ವಿವರ | 2018-19 | 2019-20 | 2020-21 | 2021-22 | 2022-23 | 2023-24 | 2024-25 | 2025-26 |
|---|---|---|---|---|---|---|---|---|---|---|
| | ರಾಜ್ಯ ವಲಯ ಯೋಜನೆಗಳು | | | | | | | | | |
| 1 | 4406-01-101-0-01-ಮೋಜಣಿ ಮತ್ತು ಗಡಿ ಗುರುತಿಸುವುದು, ರಕ್ಷಣ -ಮಾನವ-ವನ್ಯ ಪ್ರಾಣಿ ಸಂಘಷ ನಿಯಂತ್ರಣ-132-ಬಂಡವಾಳ ವೆಚ್ಚಗಳು | ಉಪಯೋಗಿಸಿದ ರೈಲುಹಳಿಗಳನ್ನು ಬಳಸಿ ರೈಲ್ವೆ ಬ್ಯಾರಿಕೇಡ್‌ಗಳನ್ನು ನಿರ್ಮಿಸಿ ಮಾನವ- ಆನೆ ಸಂಘರ್ಷ ನಿಯಂತ್ರಣ ಕಾರ್ಯ ಕೈಗೊಳ್ಳಲಾಗುತ್ತಿದೆ. | - | 5000.00 | 5000.00 | 5,000.00 | 7,500.00 | 10,000.00 | 6,000.00 | 5,874.51 |
| 2 | 2406-02-110-0-54-ಪ್ರಾಕೃತಿಕ ವನ್ಯಜೀವಿ ಸಂರಕ್ಷಣ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ ವನ್ಯಪ್ರಾಣಿ ಸಂಘರ್ಷ ನಿಯಂತ್ರಣ-139-ಪ್ರಧಾನ ಕಾಮಗಾರಿಗಳು | ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟಲು ಆನೆ ತಡೆ ಕಂದಕ / ಸೋಲಾರ್ ತಂತಿ ಬೇಲಿ ನಿರ್ಮಾಣ ಮತ್ತು ನಿರ್ವಹಣೆ ಮಾಡಲು ಮಾನವ ವನ್ಯಜೀವಿ ಸಂಘರ್ಷಕ್ಕೆ ಕಾರಣವಾದ ಅಥವಾ ಅನಾರೋಗ್ಯ ಹಾಗೂ ವಿವಿಧ ಕಾರಣಗಳಿಗಾಗಿ ವನ್ಯಜೀವಿಗಳನ್ನು ಸೆರೆಹಿಡಿಯಲಾಗುವ ಕಾರ್ಯಾ ಚರಣೆಗೆ ತಗಲುವ ವೆಚ್ಚ ಭರಿಸಲು ಉಪಯೋಗಿಸಲಾಗುತ್ತದೆ | 8724.00 | 8413.67 | 7035.00 | 6,250.00 | 9,126.33 | - | - | - |
| 3 | 4406-01-101-0-01-ಮೋಜಣಿ ಮತ್ತು ಗಡಿ ಗುರುತಿಸುವುದು, ರಕ್ಷಣ -ಮಾನವ-ವನ್ಯ ಪ್ರಾಣಿ ಸಂಘರ್ಷ ನಿಯಂತ್ರಣ-139-ಪ್ರಧಾನ ಕಾಮಗಾರಿಗಳು | ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟಲು ಆನೆ ತಡೆ ಕಂದಕ / ಸೋಲಾರ್ ತಂತಿ ಬೇಲಿ ನಿರ್ಮಾಣ ಮತ್ತು ನಿರ್ವಹಣೆ ಮಾಡಲು ಮಾನವ ವನ್ಯಜೀವಿ ಸಂಘರ್ಷಕ್ಕೆ ಕಾರಣವಾದ ಅಥವಾ ಅನಾರೋಗ್ಯ ಹಾಗೂ ವಿವಿಧ ಕಾರಣಗಳಿಗಾಗಿ ವನ್ಯಜೀವಿಗಳನ್ನು ಸೆರೆಹಿಡಿಯಲಾಗುವ ಕಾರ್ಯಾ ಚರಣೆಗೆ ತಗಲುವ ವೆಚ್ಚ ಭರಿಸಲು ಉಪಯೋಗಿಸಲಾಗುತ್ತದೆ | - | - | - | - | - | 6,000.00 | 5,100.00 | 3,983.03 |
| 4 | 2406-02-110-0-54- 106 ಪ್ರಾಕೃತಿಕ ವನ್ಯಜೀವಿ ಸಂರಕ್ಷಣ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ ಸಬ್ಸಿಡೀಸ್-50:50 ಅನುಪಾತದಲ್ಲಿ ಸೌರತಂತಿ ಬೇಲಿ ನಿರ್ಮಾಣ | ಅರಣ್ಯದಂಚಿನಲ್ಲಿ ಬರುವಂತಹ ಹಿಡುವಳಿ ಜಮೀನುಗಳಲ್ಲಿ ರೈತರು ಬೆಳೆದ ಬೆಳೆಗಳನ್ನು ವನ್ಯಪ್ರಾಣಿಗಳ ದಾಳಿಯಿಂದ ರಕ್ಷಿಸಲು ಶೇಕಡ 50:50 ರ ಅನುಪಾತದಲ್ಲಿ ಸೋಲಾರ್ ತಂತಿ ಬೇಲಿ ನಿರ್ಮಿಸಲಾಗುತ್ತಿದೆ. | 25.00 | 25.00 | 50.00 | 50.00 | 273.68 | 100.00 | 100.00 | 100.00 |
| 5 | 2406-02-110-0-54-ಪ್ರಾಕೃತಿಕ ವನ್ಯಜೀವಿ ಸಂರಕ್ಷಣ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ-034-ಹೊರ ಗುತ್ತಿಗೆ | ಕಳ್ಳಬೇಟೆ ತಡೆ ಶಿಬಿರ /ಆನೆ ಹಾಗೂ ಚಿರತೆ ಕಾರ್ಯಪಡೆ/ ಕ್ಷಿಪ್ರ ಸ್ಪಂದನ ಹಾಗೂ ವನ್ಯಪ್ರಾಣಿ ಹಿಮ್ಮೆಟ್ಟಿಸುವ ತಂಡಗಳಲ್ಲಿ ಹಾಗೂ ಆಡಳಿತಾತ್ಮಕ ಕಾರ್ಯಗಳಲ್ಲಿ ಕಾರ್ಯ ನಿರ್ವಹಿಸುವ ಹೊರಗುತ್ತಿಗೆ ನೌಕರರ ಮಜೂರಿ ಹಾಗೂ ಕಷ್ಟ ಪರಿಹಾರ ಭತ್ಯೆ ಪಾವತಿಸಲಾಗುತ್ತದೆ. | 14.00 | 0.98 | - | 3,904.43 | 3,537.69 | 4,455.64 | 4,688.61 | 7,842.13 |

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಲೆಕ್ಕ ಶೀರ್ಷಿಕೆ: | ಕಾಮಗಾರಿ ವಿವರ | 2018-19 | 2019-20 | 2020-21 | 2021-22 | 2022-23 | 2023-24 | 2024-25 | 2025-26 |
|---|---|---|---|---|---|---|---|---|---|---|
| 6 | 4406-01-101-0-02-ಕೆ.ಎಫ್‌ಡಿ.ಎಫ್-ಪ್ರಕ್ರಿಖಂಡ್ 132-ಬಂಡವಾಳ ವೆಚ್ಚಗಳು | ಮಾನವ ವನ್ಯಜೀವಿ ಸಂಘರ್ಷ ತಡೆಗಟ್ಟಲು ಸೋಲಾರ್ ತಂತಿ ಬೇಲಿ ನಿರ್ಮಾಣ, ಆನೆ ತಡೆ ಕಂದಕ ನಿರ್ಮಾಣ ನಿರ್ವಹಣೆ, ವಿಶೇಷ ವಿನ್ಯಾಸ ರಚನೆ, ವನ್ಯಜೀವಿ ಸೆರೆಹಿಡಿಯುವ ಕಾರ್ಯಾಚರಣೆ /ಬೋನ್ ಖರೀದಿ, ಡ್ರೋಣ್ ಖರೀದಿ, ವನ್ಯಜೀವಿ ಆವಾಸಸ್ಥಾನ ಅಭಿವೃದ್ಧಿ ಕಾಮಗಾರಿಗಳಾದ ಕೆರೆ ಹೂಳೆತ್ತುವ ಕಾಮಗಾರಿ, ಚೆಕ್ ಡ್ಯಾಮ್ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. | 4000.00 | - | - | - | - | - | - | 2,818.61 |
| | ಒಟ್ಟು | | 12,763.00 | 13,439.65 | 12,085.00 | 15,204.43 | 20,437.70 | 20,555.64 | 15,888.61 | 20,618.28 |

2/8/26

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.

ಅನುಬಂಧ -4

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 788(857) ಪ್ರಶ್ನೆ (ಇ) ಕ್ಕೆ ಉತ್ತರ

## ಸಾಮಾಜಿಕ ಅರಣ್ಯ ಯೋಜನೆಯಡಿ ನೆಡಲಾದ ಸಸಿಗಳ ವಿವರ

| ಕ್ರ ಸಂ | ಸಾಮಾಜಿಕ ಅರಣ್ಯ ವಿಭಾಗಗಳ ಹೆಸರು | ಸಸಿಗಳನ್ನು ನೆಟ್ಟು ನಡುತೋಪು ಬೆಳೆಸಿದ ವಿವರ (ಹೆಕ್ಟೇರ್/ ಕಿ.ಮೀ. ಗಳಲ್ಲಿ) | | |
|---|---|---|---|---|
| | | 2023-24 | 2024-25 | 2025-26 |
| 1 | 2 | 3 | 4 | 5 |
| 1 | ಬೆಂಗಳೂರು ನಗರ | 89.50 | 114.00 | 95.00 |
| 2 | ಬೆಂಗಳೂರು ಗ್ರಾಮಾಂತರ | 67.50 | 76.00 | 72.00 |
| 3 | ಚಿಕ್ಕಬಳ್ಳಾಪುರ | 329.00 | 203.00 | 72.00 |
| 4 | ಕೋಲಾರ | 8.4 Ha/ 93Km | 63Km | 54Kms |
| 5 | ರಾಮನಗರ | 51.00 | 45.00 | 36.00 |
| 6 | ಬೆಳಗಾವಿ | 98.50 | 91.00 | 86.00 |
| 7 | ಬಾಗಲಕೋಟೆ | 169.00 | 106.99 | 148.40 |
| 8 | ವಿಜಯಪುರ | 74.05 | 69.50 | 53.68 |
| 9 | ಬಳ್ಳಾರಿ | 154.00 | 77.00 | 30.00 |
| 10 | ವಿಜಯನಗರ | 105.00 | 51.00 | 18.00 |
| 11 | ಚಿತ್ರದುರ್ಗ | 350.00 | 435.85 | 459.54 |
| 12 | ದಾವಣಗೆರೆ | 290.00 | 233.00 | 33.26 |
| 13 | ಕೊಪ್ಪಳ | 57.00 | 128.00 | 60 Kms |
| 14 | ಚಾಮರಾಜನಗರ | 47.77 | 39.50 | 27.50 |
| 15 | ಚಿಕ್ಕಮಗಳೂರು | 144.00 | 18.00 | 36Kms |
| 16 | ಧಾರವಾಡ | 51.50 | 30.00 | 35.00 |
| 17 | ಗದಗ | 88.00 | 20Ha/ 84Kms | 41 Ha/ 63Kms |
| 18 | ಹಾವೇರಿ | 97.00 | 145.00 | 74.00 |
| 19 | ಹಾಸನ | 120.00 | 110.50 | 57.18Ha/ 68Kms |
| 20 | ತುಮಕೂರು | 223.00 | 257.34 | 151.55 |
| 21 | ಕಲಬುರಗಿ | 142.57 | 153.00 | 112.00 |
| 22 | ಬೀದರ್ | 261.94 | 457.53 | 352.00 |
| 23 | ರಾಯಚೂರು | 174.00 | 181.00 | 91.00 |
| 24 | ಯಾದಗಿರಿ | 310.94 | 91.00 | 185.61 |
| 25 | ಕಾರವಾರ | 139.18Ha/ 20.5Km | 24.25Ha/ 67.783 Km | 64.41Ha/ 41.6Kms |
| 26 | ಮಡಿಕೇರಿ | 14Ha/ 3Kms | 15.65Ha/ 1.88Kms | 15.44 |
| 27 | ಮಂಡ್ಯ | 42.5Kms | 42.00 | 39Kms |
| 28 | ಮೈಸೂರು | 79.00 | 59.00 | 92.00 |
| 29 | ಮಂಗಳೂರು | 39.5Ha/ 53Kms | 45km | 46.5Kms |
| 30 | ಉಡುಪಿ * | 10.25Ha/ 55Kms | 12Km | 4.5Ha/ 31.65Kms |
| 31 | ಶಿವಮೊಗ್ಗ | 32.49Kms | 28.455Kms | 43.20 |

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಾಮಾಜಿಕ ಅರಣ್ಯ ಮತ್ತು ಯೋಜನೆಗಳು),
ಬೆಂಗಳೂರು.